PR-396

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಉಪ ಆಯುಕ್ತರು (ಭೂಸ್ವಾಧೀನ & ಟಿಡಿಆರ್) ರವರ ಕಛೇರಿ, ಮೊದಲನೆ ಮಹಡಿ, ಅನೆಕ್ಸ್ ಕಟ್ಟಡ-3, ಎನ್.ಆರ್.ವೃತ್ತ, ಬೆಂಗಳೂರು**

---

ಸಂಖ್ಯೆ: ಎಲ್.ಎ.ಕ್ಯೂ/ಜಿ.ಎಲ್/ಪಿಆರ್/89/2020-21 ದಿ: 04-02-2021

**"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರ ಕಲಂ 11(1) ರಲ್ಲಿ ಮಾಡಿದ ಅಧಿಸೂಚನೆ**

## ಅಧಿಸೂಚನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ರೂಪೇನ ಅಗ್ರಹಾರ ಗ್ರಾಮದ ಸರ್ವೆ ನಂ.16/2ಬಿ ಮತ್ತು 16/4 ರಲ್ಲಿ ನೀರುಗಾಲುವೆಗೆ 2007-08ನೇ ಸಾಲಿನಲ್ಲಿ ಹೆಚ್ಚಿನ ಮಳೆ ಬಿದ್ದು, ಪ್ರವಾಹವಾಗಿರುವುದರಿಂದ ಸುತ್ತಮುತ್ತಲಿನ ನಾಗರೀಕರಿಗೆ ಮಳೆ ಹಾನಿಯನ್ನು ತಪ್ಪಿಸಲು ಪಾಲಿಕೆಯು ಸಾರ್ವಜನಿಕ ಉದ್ದೇಶಕ್ಕೆ ಉಪಯೋಗಿಸಿಕೊಂಡಿರುವುದರಿಂದ ಹಾಗೂ ಪಾಲಿಕೆ ಸ್ವಾಧೀನದಲ್ಲಿರುವುದರಿಂದ ಸ್ವತ್ತಿನ ಮಾಲೀಕರಾದ ಶ್ರೀ.ಎಂ.ಕೃಷ್ಣಾರೆಡ್ಡಿ ಹಾಗೂ ಶ್ರೀಮತಿ.ಕೆ.ಪಾರ್ವತಮ್ಮ ರವರ ಸ್ವತ್ತಿನ ಸರ್ವೆ ನಂ.16/2ಬಿ ಮತ್ತು 16/4 ರ ಸ್ವತ್ತುಗಳಲ್ಲಿ ಮಳೆ ನೀರುಗಾಲುವೆಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ನಿರ್ಮಾಣ ಮಾಡಿರುವುದರಿಂದ ಹಾಗೂ ಸ್ವಾಧೀನದಲ್ಲಿರುವುದರಿಂದ ಸದರಿ ಸ್ವತ್ತುದಾರರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:27753/2018 ನ್ನು ಸಲ್ಲಿಸಿ ದಿ:23-09-2019 ರಂತೆ ಆದೇಶವಾಗಿರುತ್ತದೆ. ಈ ಆದೇಶವನ್ನು ಪಾಲನೆ ಮಾಡಿಲ್ಲವೆಂದು ಭೂಮಾಲೀಕರು ಕರ್ನಾಟಕ ಉಚ್ಚನ್ಯಾಯಾಲದಲ್ಲಿ CCCಸಂಖ್ಯೆ:591/2020 ರಂತೆ ನಿಂಧನಾ ಅರ್ಜಿಯನ್ನು ದಾಖಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ದಿ:21-01-2021 ರಂದು ನಡೆದ ವಿಚಾರಣೆಯಲ್ಲಿ ತುರ್ತಾಗಿ ಭೂಸ್ವಾಧೀನ ಕಾಯ್ದೆ 2013ರನ್ವಯ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ನಿರ್ದೇಶನ ನೀಡಿರುತ್ತದೆ. ಮಾನ್ಯ ನ್ಯಾಯಾಲಯದ ದಿ:23-09-2019 ರ ಆದೇಶದಂತೆ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರಜಿಲ್ಲೆ, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-09 ಇವರನ್ನು ಕಲಂ-43ರಂತೆ ಬಾಧಿತ ಕುಟುಂಬದ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಉದ್ದೇಶಕ್ಕಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ/56/ಭೂಸ್ವಾಬೆ/2014, ದಿ:17-07-2014 ರಂತೆ ಆಡಳಿತಾಧಿಕಾರಿಯಾಗಿ ನೇಮಿಸಿದೆ.

ಈ ಕೆಳಗಿನ ಅನುಸೂಚಿಯಲ್ಲಿ ಸೂಚಿಸಿದಂತೆ ಪಾಲಿಕೆಯ ವಾರ್ಡ್ ಸಂಖ್ಯೆ:175 ರ ವ್ಯಾಪ್ತಿಯಲ್ಲಿ ಬರುವ ರೂಪೇನ ಅಗ್ರಹಾರ ಗ್ರಾಮದ ಸರ್ವೆ ನಂ.16/2ಬಿ ಮತ್ತು 16/4 ಸ್ವತ್ತಿನಲ್ಲಿ 1780 ಚ.ಮೀ ವಿಸ್ತೀರ್ಣದ ಜಾಗವನ್ನು ಬೃಹತ್ ನೀರುಗಾಲುವೆಗೆ 2007-08ನೇ ಸಾಲಿನಲ್ಲಿ ಒತ್ತುವರಿ ಮಾಡಿ ಸಾರ್ವಜನಿಕ ಉದ್ದೇಶಕ್ಕೆ ಪಾಲಿಕೆಯು ಉಪಯೋಗಿಸಿಕೊಂಡಿರುವುದರಿಂದ ಹಾಗೂ ಪಾಲಿಕೆಯ ಸ್ವಾಧೀನದಲ್ಲಿರುವುದರಿಂದ ಮಾನ್ಯ ಉಚ್ಚನ್ಯಾಯಾಲಯದ ನಿರ್ದೇಶನದ ಮೇರೆಗೆ ಪರಿಹಾರ ನೀಡಬೇಕಾಗಿರುತ್ತದೆ ಹಾಗೂ ಈ ಸ್ವತ್ತನ್ನು ಈಗಾಗಲೇ ಉಪಯೋಗಿಸಿಕೊಂಡಿರುವುದರಿಂದ ಸಾರ್ವಜನಿಕರ ಆಕ್ಷೇಪಣೆಗಳನ್ನು ಸ್ವೀಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

## ಅನುಸೂಚಿ

ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು ಹೋಬಳಿ:ಬೇಗೂರು ಗ್ರಾಮ ರೂಪೇನ ಅಗ್ರಹಾರ

| ಕ್ರ. ಸಂ. | ಸರ್ವೆ ನಂ. | ಹಕ್ಕು | ಜಮೀನಿನ ತರಹೆ | ಆಸಕ್ತಿ ವ್ಯಕ್ತಿಗಳ ಹೆಸರು ಮತ್ತು ವಿಳಾಸ (ಖಾತೆಯಂತೆ) | ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ(ಚ.ಅಡಿ)ಗಳಲ್ಲಿ | | | ಚಕ್ಕುಬಂದಿ (ಋಣ ಭಾರ ರಾಹಿತ್ಯ ಪತ್ರದಂತೆ) |
|---|---|---|---|---|---|---|---|---|
| | | | | | ಒಟ್ಟು ಚ.ಅಡಿ | ಖರಾಬು ಚ.ಅಡಿ | ಏನು ಚ.ಅಡಿ | |
| 1 | ಸರ್ವೆ ನಂ.16/2ಬಿ ಮತ್ತು 16/4 | ಖಾಸಗಿ | ನಿವೇಶನ | ಶ್ರೀ.ಎಂ.ಕೃಷ್ಣಾರೆಡ್ಡಿ ಹಾಗೂ ಶ್ರೀಮತಿ.ಕೆ.ಪಾರ್ವತಮ್ಮ | 1780 | – | – | ಪೂರ್ವ NH-7 ರಸ್ತೆ ಪಶ್ಚಿಮಕ್ಕೆ ಸುಬ್ಬಯ್ಯನಾಯ್ಡು ರವರಿಗೆ ಸೇರಿದ ಸ್ವತ್ತು ಉತ್ತರಕ್ಕೆ ಸುಬ್ಬಯ್ಯನಾಯ್ಡು ರವರಿಗೆ ಸೇರಿದ ಸ್ವತ್ತು ದಕ್ಷಿಣಕ್ಕೆ ರಸ್ತೆ |
| | | | | ಒಟ್ಟು | **1780** | | | |

ಈ ಅಧಿಸೂಚನೆಯ ಮೂಲಕ ತಿಳಿಯಪಡಿಸುವುದೇನೆಂದರೆ **"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013"** ರ (ದಿ:01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ/199/ಎಕ್ಯೂಬಿ/2012, ದಿ:12-06-2014 ರಂತೆ ಭೂಸ್ವಾಧೀನ ಕಾಯ್ದೆ-2013 ರ ಕಲಂ-11 ರ ಸೌಲಭ್ಯದ ಮೇರೆಗೆ ಕಾರ್ಯಪಾಲನೆ ಅಧಿಕಾರವನ್ನು ಉಪ ಆಯುಕ್ತರು (ಭೂಸ್ವಾಧೀನ) ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್.ವೃತ್ತ, ಬೆಂಗಳೂರು ಇವರಿಗೆ ನೀಡಲಾಗಿದೆ. ಈ ಪ್ರಕಟಣೆಯು ಕೇಂದ್ರ ಅಧಿನಿಯಮ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 ರ" ಕಲಂ 11(1) ನೇ ಪ್ರಕರಣ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದೆ.

ಭೂಸ್ವಾಧೀನಕ್ಕೆ ಒಳಪಡುವ ಭೂಮಿಯ ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳ ವಿಭಾಗ, ಬಿಬಿಎಂಪಿ, ಕೇಂದ್ರ ಕಛೇರಿ, (ಅನೆಕ್ಸ್-3, ಕೊಠಡಿ ಸಂಖ್ಯೆ:107) ರವರ ಕಛೇರಿಯಲ್ಲಿ ಕೆಲಸದ ದಿನದಲ್ಲಿ ಪರಿಶೀಲಿಸಲಾಗಿರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಇವರ ಸಿಬ್ಬಂಧಿ ಹಾಗೂ ಕೆಲಸಗಾರರಿಗೆ ಸದರಿ ಅಧಿನಿಯಮ-12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಮತ್ತು ಉಪಬಂಧಿಸಿದಂತೆ ಅವರ ಕೆಲಸವನ್ನು ಸೂಕ್ತವಾಗಿ ಕಾರ್ಯಗತಗೊಳಿಸಲು ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ನೀಡಿರುತ್ತದೆ.

"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ರ ಕಲಂ 11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಭೂಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ, ಅಡವಿಡುವ, ಅನುಭವಿಸುವ ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರ ನೇಮಿಸಿದ ಭೂಸ್ವಾಧೀನಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಯಾವುದೇ ರೀತಿಯ ವಹಿವಾಟುಗಳು ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಲ್ಲಿ ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೆ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಉಪ ಆಯುಕ್ತರು (ಭೂಸ್ವಾಧೀನ & ಟಿಡಿಆರ್)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**PD-19**